**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 19.08.2025.**

ಪಾಟೀ ಸವಾಲು : ವಾದಿಗಳ ಪರ ಶ್ರೀ. ಕೆ.ಕೆ.ಎಲ್. ವಕೀಲರಿಂದ

1. ನಾನು ಪ್ರತಿವಾದಿಯ ಫೈನಾನ್ಸ್ ಕಂಪನಿಯಲ್ಲಿ ಪ್ರಾದೇಶಿಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಸಾಕ್ಷ್ಯ ನುಡಿಯಲು ಪ್ರತಿವಾದಿಗಳ ಕಂಪನಿಯವರು ಅಧಿಕಾರ ಪತ್ರ ನೀಡಿರುತ್ತಾರೆ. ನಾನು ಕಳೆದ 10 ತಿಂಗಳಿನಿಂದ ಪ್ರತಿವಾದಿಗಳ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗಿಂತ ಪೂರ್ವದಲ್ಲಿ ದಿನೇಶ ಎಂಬುವವರು ಪ್ರಾದೇಶಿಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು.

2. ವಜ್ರೇಶ್ ಎಂಬುವವರು 2ನೇ ಪ್ರತಿವಾದಿಯ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕರಾಗಿದ್ದರು. ಈಗ ಚೇತನ್ ಕುಮಾರ್ ಎಂಬುವವರು 2ನೇ ಪ್ರತಿವಾದಿಯ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ. 1ನೇ ಪ್ರತಿವಾದಿಯ ಫೈನಾನ್ಸ್ ಕಂಪನಿಯ ಕೆಳಗಡೆ ಬರುವ 30 ಶಾಖೆಗಳಿಗೆ ನಾನು ಪ್ರಾದೇಶಿಕ ವ್ಯವಸ್ಥಾಪಕನಾಗಿರುತ್ತೇನೆ.

3. ಶಾಖೆಗಳಿಗೆ ಬೇಕಾದ ಕಟ್ಟಡ, ಸಿಬ್ಬಂದಿಗಳು, ನನ್ನ ಅಧಿಕಾರ ವ್ಯಾಪ್ತಿಯಲ್ಲಿಯೇ ಬರುತ್ತವೆ. ದಾವಾ ಷೆಡ್ಯೂಲ್ ಸ್ವತ್ತು ಗಿರಿಗೌಡ ಎಂಬುವವರ ಮಾಲೀಕತ್ವಕ್ಕೆ ಒಳಪಟ್ಟಿರುತ್ತದೆ ಎಂದರೆ ಸರಿ. ವಾದಿಗಳು ಗಿರಿಗೌಡರವರ ಮಕ್ಕಳುಗಳು ಎಂದರೆ ಸರಿ. ಗಿರಿಗೌಡರವರು ಜುಲೈ-2016 ರಲ್ಲಿ ಮೃತಪಟ್ಟಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ದಿನಾಂಕ 19.10.2012 ರಂದು ಬಾಡಿಗೆಗೆ ನಾವು ಗಿರಿಗೌಡರಿಂದ ಪಡೆದುಕೊಂಡಿದ್ದೇವು ಎಂದರೆ ಸರಿ. ಗಿರಿಗೌಡರವರು ಬರೆದುಕೊಟ್ಟ ಬಾಡಿಗೆ ಕರಾರು ಪತ್ರದ ಮೂಲ ಪ್ರತಿ ನಮ್ಮ ಬಳಿ ಇದೆ ಎಂದರೆ ಸರಿ. ಬಾಡಿಗೆ ಕರಾರಿನ ಮೂಲ ಪ್ರತಿಯು ನಮ್ಮ ಕಂಪನಿಯ ಕಾರ್ಪೋರೇಟ್ ಕಛೇರಿಯಲ್ಲಿ ಇರುತ್ತದೆ. ಸದರಿ ದಾಖಲೆಯನ್ನು ನಾನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

4. ಬಾಡಿಗೆ ಕರಾರಿನ ಪ್ರಕಾರ ತಿಂಗಳಿಗೆ ರೂ.20,000/- ಬಾಡಿಗೆ ನಿಗದಿಯಾಗಿತ್ತು ಎಂದರೆ ಸರಿ. ಸದರಿ 20,000/- ರೂಪಾಯಿ ಬಾಡಿಗೆ ಹಣವನ್ನು ಗಿರಿಗೌಡ ಇವರಿಗೆ ಪಾವತಿ ಮಾಡಿ ರಶೀದಿ ಪಡೆದುಕೊಳ್ಳುವಂತೆ ಕರಾರು ಆಗಿತ್ತು ಎಂದರೆ ಸರಿ. ಸದರಿ ಬಾಡಿಗೆ ಕರಾರಿನ ಪ್ರಕಾರ ಮೂರು ವರ್ಷಗಳು ಆದ ನಂತರ ಶೇಕಡ 15 ರಷ್ಟು ಬಾಡಿಗೆಯನ್ನು ಪ್ರತಿವರ್ಷ ಹೆಚ್ಚಳ ಮಾಡಿಕೊಂಡು ಹೋಗಬೇಕು ಎಂದು ಕರಾರು ಆಗಿತ್ತು ಎಂದರೆ ಸರಿ.

5. ಬಾಡಿಗೆ ಕರಾರಿನ ರೀತ್ಯಾ ಮೃತ ಗಿರಿಗೌಡ ಇವರಿಗೆ ಬಾಡಿಗೆ ಪಾವತಿ ಮಾಡಿ ನಾವು ರಶೀದಿ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲಿಗೆ ನಗದು ಹಣ ನೀಡಿ ಮೃತ ಗಿರಿಗೌಡರ ಸಹಿ ಪಡೆದುಕೊಳ್ಳುತ್ತಿದ್ದೇವು, ನಂತರ ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ರಶೀದಿಗಳು ಮತ್ತು ಬ್ಯಾಂಕ್ ವಿವರಗಳು ನನ್ನ ಬಳಿ ಇವೆ ಎಂದರೆ ಸರಿ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಬ್ಯಾಂಕಿನ ಖಾತೆಗೆ ನೇರವಾಗಿ ಹಣ ಪಾವತಿ ಮಾಡುವ ಬಗ್ಗೆ ಮೂಲ ಬಾಡಿಗೆ ಕರಾರಿನಲ್ಲಿ ಯಾವುದಾದರೂ ನಿಬಂಧನೆ ತಿದ್ದುಪಡಿ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಬಾಡಿಗೆ ಪಾವತಿ ಮಾಡಿದ ಬಗ್ಗೆ ಅಥವಾ ಬ್ಯಾಂಕ್ ಮುಖಾಂತರ ಮೃತ ಗಿರಿಗೌಡರ ಖಾತೆಗೆ ಹಣ ಜಮೆ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

6. ಬಾಡಿಗೆ ಕರಾರನ್ನು ರದ್ದುಗೊಳಿಸಬೇಕಾದರೆ ನಮ್ಮ ವಲಯ ಕಛೇರಿ ಅಧಿಕಾರಿಗಳ ಮುಖಾಂತರವೆ ರದ್ದುಗೊಳಿಸಬೇಕು ಎಂದರೆ ಸರಿ. ಅದೇ ರೀತಿ ಬಾಡಿಗೆ ಕರಾರು ರದ್ದುಗೊಂಡ ಬಗ್ಗೆ ದಾಖಲೆ ಬರೆಸಿಕೊಳ್ಳುತ್ತೇವೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಮೃತ ಗಿರಿಗೌಡರಿಂದ ಯಾವುದಾದರೂ ದಾಖಲೆಯನ್ನು ಬಾಡಿಗೆ ರದ್ದು ಆದ ಬಗ್ಗೆ ಬರೆಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಅವರಿಗೆ ಕಾನೂನು ತಿಳುವಳಿಕೆ ನೋಟಿಸ್ ನೀಡಿದ್ದೇವು ಎಂದು ನುಡಿಯುತ್ತಾರೆ. ನೀವು ನೋಟಿಸ್ ನೀಡಿದ ನಂತರ ಬಾಡಿಗೆ ರದ್ದತಿ

ಪತ್ರ ಬರೆಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಅವರು ನಮ್ಮ ಶಾಖೆಗೆ ಬಂದಿದ್ದು, ಅವರಿಗೆ ನಾವು ನಮ್ಮ ವ್ಯಾಪಾರವು ನಷ್ಟದಲ್ಲಿ ಇದೆ, ಹಾಗಾಗಿ ಬಾಡಿಗೆ ರದ್ದತಿ ಮಾಡಿಕೊಳ್ಳುತ್ತೇವೆ ಎಂದು ತಿಳಿಸಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಕಂಪನಿಯವರು ಯಾವುದೇ ವ್ಯವಹಾರ ಮಾಡಿದರೂ ಸಹ ದಾಖಲೆಗಳ ಮುಖಾಂತರವೇ ನಿರ್ವಹಿಸಬೇಕು ಎಂದರೆ ಸರಿ. ಬಾಡಿಗೆ ಕರಾರು ರದ್ದತಿ ಆಗುವ ಸಮಯದಲ್ಲಿ ಬಾಡಿಗೆ ಮನೆಯಲ್ಲಿ ಇಟ್ಟಿದ್ದ ಎಲ್ಲಾ ನಮ್ಮ ವಸ್ತುಗಳನ್ನು ನಾವು ತೆಗೆದುಕೊಂಡು ಮನೆಯನ್ನು ಖಾಲಿ ಮಾಡಿದ ನಂತರ ಮುಂಗಡ ಹಣವನ್ನು ನಾವು ಮಾಲೀಕರಿಂದ ಪಡೆದುಕೊಂಡು ನಂತರ ಕೀಯನ್ನು ಮಾಲೀಕರಿಗೆ ಕೊಡುತ್ತೇವೆ ಎಂದರೆ ಸರಿ. ನಾವು ಪ್ರಸ್ತುತ ದಾವೆಯಲ್ಲಿ ವಾದಿಗಳ ತಂದೆ ಗಿರಿಗೌಡರಿಂದ ರೂ.2,00,000/- ಗಳ ಮುಂಗಡ ಹಣ ಪಡೆದುಕೊಂಡ ಬಗ್ಗೆ ಹಾಗೂ ಬಾಡಿಗೆ ರದ್ದತಿ ಬಗ್ಗೆ ದಾಖಲೆ ಇದೆಯೇ ಎಂದರೆ ಸಾಕ್ಷಿಯು ನಮಗೆ ಗಿರಿಗೌಡರವರು ಮುಂಗಡ ಹಣ ನೀಡಿಲ್ಲ ಮತ್ತು ಬಾಡಿಗೆ ಮನೆಗೆ ಅಳವಡಿಸಿದ್ದ ಕಬ್ಬಿಣದ ಡೋರನ್ನು ಬಿಚ್ಚಿಕೊಳ್ಳಲು ಹೋದಾಗ ಬಿಡಲಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ಪೊಲೀಸ್ ದೂರು ಅಥವಾ ಕಾನೂನು ಕ್ರಮ ಜರುಗಿಸಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ 19.10.2012 ರ ಬಾಡಿಗೆ ಕರಾರು ಇನ್ನು ಕೂಡ ಚಾಲ್ತಿಯಲ್ಲಿ ಇದ್ದು ಅದು ರದ್ದು ಆಗಿಲ್ಲ, ಆ ಕಾರಣದಿಂದ ನಮ್ಮ ಕಂಪನಿಯವರು ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ವಾದಿಗಳಿಗೆ ನೀಡಿಲ್ಲ, ಹಾಗೂ ಅವರಿಂದ ಮುಂಗಡ ಹಣ ಪಡೆದುಕೊಂಡಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಫೆಬ್ರುವರಿ 2016 ತಿಂಗಳವರೆಗೆ ಮಾತ್ರವೇ ಬಾಡಿಗೆಯನ್ನು ನೀಡಿದ್ದು ನಂತರ ಬಾಡಿಗೆ ನೀಡಿಲ್ಲ ಎಂದರೆ ಸಾಕ್ಷಿಯು 2015 ಡಿಸೆಂಬರ್ ತಿಂಗಳಿನಲ್ಲಿ ಗಿರಿಗೌಡರವರಿಗೆ 2 ತಿಂಗಳು ಮುಂಚಿತವಾಗಿ ನಾವು ಖಾಲಿ ಮಾಡುತ್ತೇವೆಂದು ತಿಳಿಸಿದ್ದೇವು, ಹಾಗಾಗಿ ನಾವು ಫೆಬ್ರುವರಿ 2016 ರಲ್ಲಿಯೇ ಷೆಡ್ಯೂಲ್ ಸ್ವತ್ತನ್ನು ಖಾಲಿ ಮಾಡಿದ್ದು ಇದಕ್ಕೆ ಒಪ್ಪಿಗೆ ಸೂಚಿಸಿ ಮೃತ ಗಿರಿಗೌಡರವರು ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಗಿರಿಗೌಡರವರು ಯಾವ ಪತ್ರಕ್ಕೆ

ಒಪ್ಪಿಗೆ ಸೂಚಿಸಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅಂಚೆ ಸ್ವೀಕೃತಿಗೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 19.10.2012 ರ ಕರಾರು ಇನ್ನು ಕೂಡ ರದ್ದತಿ ಆಗಿಲ್ಲ ಹಾಗೂ ನಾವು ಬಾಡಿಗೆ ಹಣವನ್ನು ಇಲ್ಲಿಯವರೆಗೆ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಮೃತ ಗಿರಿಗೌಡರವರು ಜನವರಿ 2016 ರಂದು ನಮ್ಮ ಕಛೇರಿಗೆ ಬಂದಿದ್ದರು. ಮೃತ ಗಿರಿಗೌಡರವರು ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು, ಆ ಕಾರಣದಿಂದ ಅವರು ನಮ್ಮ ಶಾಖೆಗೆ ಬಂದಿಲ್ಲ ಎಂದರೆ ಸಾಕ್ಷಿಯು ಫೆಬ್ರುವರಿ 2016 ರ ನಂತರ ಅವರಿಗೆ ಅನಾರೋಗ್ಯ ಆಯಿತು ಎಂದು ನುಡಿಯುತ್ತಾರೆ. ನಾವು ಮೃತ ಗಿರಿಗೌಡರವರಿಗೆ ಒಂದು ಸೆಟ್ ಕೀಯನ್ನು ನೀಡಿದ್ದು, ಇನ್ನೊಂದು ಸೆಟ್ ಕೀ ನಮ್ಮ ಕಛೇರಿಯಲ್ಲಿ ಇರಬಹುದು, ಅದನ್ನು ವಿಚಾರಿಸಿ ಹೇಳಬೇಕು.

8. ವಾದಿಗಳ ವಿರುದ್ಧ ಗೌರವಾನ್ವಿತ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 119/2019 ರ ರೀತ್ಯಾ ದಾವಾ ಸಲ್ಲಿಸಿ ಅವರಿಂದ ಮುಂಗಡ ಹಣ ಮತ್ತು ಸ್ಟ್ರಾಂಗ್ ರೂಂ ಸೆಟ್ಟನ್ನು ವಾಪಸ್ಸು ಮಾಡುವಂತೆ ಆದೇಶಿಸಬೇಕು ಎಂದು ಕೋರಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ವಜ್ರೇಶ್ ಎಂಬುವವರು ನಮ್ಮ ಕಂಪನಿಯ ಪರವಾಗಿ ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಸರಿ. ಸದರಿ ಸಾಕ್ಷ್ಯದಲ್ಲಿ ಅವರು ಒಂದು ಸೆಟ್ ಕೀ ನಮ್ಮ ಬಳಿ ಇದೆ ಎಂದು ನುಡಿದಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಆಸ್ತಿಯು ಈಗಲೂ ಸಹ ನಮ್ಮ ಸ್ವಾಧೀನದಲ್ಲಿಯೇ ಇದೆ ಎಂದರೆ ಸಾಕ್ಷಿಯು ಅವರು ಅಡ್ವಾನ್ಸ್ ವಾಪಸ್ಸು ಮಾಡದೇ ಇರುವ ಕಾರಣ ಕೀ ನಮ್ಮ ಬಳಿಯೇ ಇದೆ ಎಂದು ನುಡಿಯುತ್ತಾರೆ. ಬಾಡಿಗೆ ರದ್ದತಿ ಆಗದೇ ಇರುವ ಕಾರಣ ನಾವು ಸ್ಟ್ರಾಂಗ್ ರೂಂ ಸೆಟ್ಟನ್ನು ಸ್ಥಳಾಂತರಿಸಿಲ್ಲ ಮತ್ತು ಕೀಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

9. ನಿ.ಪಿ1 ರಲ್ಲಿ ಬಾಡಿಗೆ ರದ್ದತಿ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಬಾಡಿಗೆ ರದ್ದತಿಗೆ ಸಂಬಂಧಪಟ್ಟಂತೆ ಮೃತ ಗಿರಿಗೌಡ ಮತ್ತು ನಮ್ಮ ಕಂಪನಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

10. ನಮಗೆ 2016 ರ ಜುಲೈ ನಲ್ಲಿ ಗಿರಿಗೌಡರವರು ಮರಣ ಹೊಂದಿದ್ದ ಸಂಗತಿಯು ಅವಾಗಲೇ ತಿಳಿದಿತ್ತು ಎಂದರೆ ಸರಿ. ನಿ.ಡಿ8 ರ ರೀತ್ಯಾ ಮೃತ ಗಿರಿಗೌಡರವರಿಗೆ ದಿನಾಂಕ 26.06.2018 ರಂದು ನೋಟಿಸ್ ಜಾರಿಗೊಳಿಸಿದ್ದೇವು ಎಂದರೆ ಸರಿ. ಮೃತ ಗಿರಿಗೌಡ ಮರಣ ಹೊಂದಿದ ಬಗ್ಗೆ ನಮಗೆ ಮಾಹಿತಿ ಇಲ್ಲ ಮತ್ತು ಅವರು ನಮ್ಮ ಕಛೇರಿಗೆ ಬಂದಿಲ್ಲ, ಹಾಗಾಗಿ 2018 ರಲ್ಲಿ ನಾವು ನೋಟಿಸ್ ನೀಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವಾಧೀನವನ್ನು ಮೃತ ಗಿರಿಗೌಡರಿಗೆ ವಹಿಸಲು ನಮ್ಮ ಶಾಖೆಯಿಂದ ಯಾವಾಗ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಅವರ ಮಕ್ಕಳು ಅಡ್ಡಿಪಡಿಸಿದ ಬಗ್ಗೆ ನನ್ನ ಹಿಂದಿನ ಶಾಖಾಧಿಕಾರಿಗಳು ನನಗೆ ತಿಳಿಸಿದ್ದರು. ನಾವು ಈಗಲೂ ಸಹ ಷೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುವುದರಿಂದ ನಮಗೆ ಅಡ್ಡಿಪಡಿಸುವ ಪ್ರಮೇಯ ಇಲ್ಲ ಎಂದರೆ ಸರಿಯಲ್ಲ. ನಿ.ಡಿ.12 ರ ರೀತ್ಯಾ ಬಾಡಿಗೆ ಕರಾರನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿ.

11. ನಮ್ಮ ಬ್ಯಾಂಕ್ ಸಾಮಾನ್ಯವಾಗಿ ಖಾಯಂ ಆಗಿ ವ್ಯವಹಾರ ಮಾಡುತ್ತದೆ ಎಂದರೆ ಸರಿ. ನಿ.ಡಿ12 ನ್ನು ದಿನಾಂಕ 16.03.2017 ರಲ್ಲಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಬಾಡಿಗೆ ಕರಾರು ರದ್ದತಿ ಆಗಿಲ್ಲದೇ ಇದ್ದರೂ ಸಹ ರದ್ದತಿ ಆಗಿದೆ ಎಂದು ತೋರಿಸಲು ನಿ.ಡಿ12 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ12 ರ ಸ್ಥಳದಲ್ಲಿ ಬ್ಯಾಂಕ್ ವ್ಯವಹಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಬಾಡಿಗೆ ಮರು ಪಾವತಿ ಮಾಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವಾ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ದಾಖಲು ಮಾಡಿದ ನಂತರ ಇಲ್ಲಿಯವರೆಗೂ ನಾವು ಬಾಡಿಗೆ ನೀಡಲು ಬಾದ್ಯಸ್ಥರಿದ್ದೇವೆ ಎಂದರೆ ಸರಿಯಲ್ಲ. ಬಾಡಿಗೆ ಪಾವತಿ ಮಾಡುವಂತೆ ದಾವಾ

ಪೂರ್ವದಲ್ಲಿ ನೋಟಿಸ್ ಜಾರಿಗೊಳಿಸಿದ್ದರೂ ಸಹ ನಾವು ಬಾಡಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಷೆಡ್ಯೂಲ್ ಸ್ವತ್ತನ್ನು ಖಾಲಿ ಮಾಡದೇ ಇರುವ ಕಾರಣ ಮುಂಗಡ ಹಣ ಪಾವತಿ ಮಾಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.